**ಓ. ಎಸ್ . 194/2017**

**ಪಿ.ಡಬ್ಲ್ಯೂ- 1**

(ದಿನಾಂಕಃ05-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

ಪಾಟಿ ಸವಾಲು ಃ ಶ್ರೀ ಎಲ್ ವಿ ಎಮ್ 7 ನೇ ಪ್ರತಿವಾದಿ ಪರ ವಕೀಲರಿಂದ -

ನಮ್ಮ ತಂದೆ ಬಸವಣ್ಣ ಇವರಿಗೆ 5 ಜನ ಮಕ್ಕಳು. 2 ದತ್ತಕಕ್ಕೆ ಹೋಗಿದ್ದು 3 ಜನ ಉಳಿದಿರುತ್ತೇವೆ. ಗಿರಿಯಪ್ಪ ಮತ್ತು ಗೋಪಾಲಕೃಷ್ಣ ನನ್ನ ತಮ್ಮಂದಿರು. ವಾದ ಪತ್ರ ಬರೆಯಲು ಮತ್ತು ಈ ಕೇಸನ್ನು ಹಾಕಲು ನಾನೇ ಮಾಹಿತಿ ನೀಡಿರುತ್ತೇನೆ. ಜಮೀನುಗಳ ವ್ಯವಹಾರದ ಬಗ್ಗೆ ಹಾಗೂ ಮಾರಿದ ಬಗ್ಗೆ ಹಾಗೂ ಬೋಜಾ ಕೂರಿಸಿದ ಬಗ್ಗೆ ನನಗೆ ತಿಳುವಳಿಕೆ ಇರುತ್ತದೆ. ದಾವಾ ಜಮೀನುಗಳು ಎಲ್ಲಾ ಕೂಡಿಸಿ ಒಟ್ಟು 9 ರಿಂದ 10 ಎಕರೆಯಾಗುತ್ತದೆ. 9 ರಿಂದ 10 ಎಕರೆ ಬೇರೆ ಬೇರೆ ಸರ್ವೆ ಸಂಖ್ಯೆಗಳು ಇರುತ್ತವೆ. ಒಟ್ಟು 8 ಸರ್ವೆ ಸಂಖ್ಯೆಗಳು ಇರುತ್ತವೆ. ಸರ್ವೆ ಸಂಖ್ಯೆ ಃ 111 ಈ ದಾವೆಯಲ್ಲಿ ಬಿಟ್ಟಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ಸಂಖ್ಯೆಃ 111 ನಮ್ಮ ಕುಟುಂಬಕ್ಕೆ ಸೇರಿದ ಜಮೀನು ಎಂದರೆ ಸರಿ . ಸರ್ವೆ ಸಂಖ್ಯೆಃ 111 ನಲ್ಲಿ 12 ಗುಂಟೆ ಜಮೀನು ಇರುತ್ತದೆ.

ಸರ್ವೆ ಸಂಖ್ಯೆಃ 107, 109, 113, 115/ಪಿ2, 119, 127, 50/2, 135 ಗಳು ಇರುತ್ತವೆ. ಸರ್ವೆ ಸಂಖ್ಯೆಃ 111 ಹಿಡಿದುಕೊಂಡು ಈ ಎಲ್ಲಾ ಸರ್ವೆ ಸಂಖ್ಯೆ ಗಳಲ್ಲಿ ಮೊದಲು ನಮ್ಮ ತಂದೆಯವರ ಹೆಸರು ಇತ್ತು ಎಂದರೆ ಸರಿ . ಸದರಿ ಜಮೀನುಗಳಲ್ಲಿ ಯಾರಾದರೂ ಜಮೀನುಗಳನ್ನು ಮಾರಾಟ ಮಾಡಿದರೆ ಪಾಲು ಸರಿಯಾಗುವುದಿಲ್ಲ ಎಂದರೆ ಸರಿ . ನಮ್ಮ ವಾದ ಪತ್ರದಲ್ಲಿ ಪ್ಯಾರಾ ಸಂಖ್ಯೆಃ 6 ರಲ್ಲಿ ಗೋಪಾಲಕೃಷ್ಣ ಈತನು ರಿ.ಸ. ಸಂಖ್ಯೆಃ 111 ನ್ನು ಬೇರೆಯವರಿಗೆ ಮಾರಾಟ ಮಾಡಿದ್ದಾನೆ ಎಂದು ಬರೆಯಿಸಿರುತ್ತೇನೆ ಎಂದರೆ ಸರಿ . ಅದನ್ನು ಬಸವಣ್ಣ ರಾಮಪ್ಪ ಮಗದುಮರವರಿಗೆ ಮಾರಾಟ ಮಾಡಿದ್ದಾನೆ ಎಂದರೆ ಸರಿ . ಸದರಿ ಜಮೀನನ್ನು ಯಾವಾಗ ಮಾರಾಟ ಮಾಡಿದ್ದಾನೆ ಎಂದು ನನಗೆ ನೆನಪಿಲ್ಲ. ಸುಮಾರು 10-12 ವರ್ಷಗಳ ಹಿಂದೆ ಮಾರಾಟ ಮಾಡಿದ್ದಾನೆ. ಸದರಿ ಕ್ರಯ ಪತ್ರ ನನ್ನ ಹಿಸ್ಸೆಯ ಮೇಲೆ ಯಾವುದೇ ಬಂಧನಕಾರಿ ಇರುವುದಿಲ್ಲ ಎಂದು ಪ್ರಾರ್ಥನೆ ಕೇಳಿಲ್ಲ ಎಂದರೆ ಸರಿ . ಆ ರೀತಿ ಮಾರಾಟ ಮಾಡುವುದು ತಪ್ಪಾಗುತ್ತದೆ ಎಂದು ತಿಳಿಸಿ ಹೇಳಿರುತ್ತೇವೆ.

ನಮ್ಮ ತಂದೆ ಬಸವಂತಪ್ಪ ತೀರಿಕೊಂಡ ನಂತರ ನಮ್ಮ ಎಲ್ಲರ ಹೆಸರು ಎಲ್ಲಾ ಜಮೀನು ಉತಾರಗಳಲ್ಲಿ ನಮೂದು ಆಗಿರುತ್ತವೆ. ತಹಶಿಲ್ದಾರ ಕಛೇರಿಯಿಂದ ಜಮೀನಿನ ಉತಾರಗಳನ್ನು ನಾನೇ ತಂದಿರುತ್ತೇನೆ. ಈ ಎಲ್ಲಾ ಜಮೀನುಗಳ ಸರ್ವೆ ಸಂಖ್ಯೆಗಳಲ್ಲಿ ನಮ್ಮ ಅಣ್ಣ ತಮ್ಮಂದಿರ ಹೆಸರುಗಳು ಬೇರೆ ಬೇರೆ ನಮೂದಾಗಿರುತ್ತವೆ ಎಂದರೆ ಸರಿಯಲ್ಲ. ಸರ್ವೆ ಸಂಖ್ಯೆ 50/2 ರಲ್ಲಿ ಚೌಗಲಾ ಅಪರಾಯಿ ಭೀಮಪ್ಪ ಅವರ ಹೆಸರು 1 ಎಕರೆ 19 ಗುಂಟೆಗೆ ನಮೂದಾಗಿದ್ದು ಅವರು ನಮ್ಮ ಕುಟುಂಬದ ಸದಸ್ಯರಲ್ಲ ಎಂದರೆ ಸರಿ . ಸದರಿ ಜಮೀನು ಖರೀದಿ ಪತ್ರದ ಮೂಲಕ ಬೇರೆಯವರಿಗೆ ಹೋಗಿದ್ದು ಸದರಿ ಕ್ರಯ ಪತ್ರ ನನ್ನ ಹಿಸ್ಸೆಯ ಮೇಲೆ ಬಂಧನಕಾರಿ ಇರುವುದಿಲ್ಲ ಎಂದು ಪ್ರಾರ್ಥನೆ ಕೋರಿಲ್ಲ ಎಂದರೆ ಸರಿ . ಅದೇರೀತಿ ಸರ್ವೆ ಸಂಖ್ಯೆ 50/2 ರಲ್ಲಿ ಚೌಗಲಾ ಲಕ್ಷ್ಮಣ ಭೀಮಪ್ಪ ಅವರ ಹೆಸರು 20 ಗುಂಟೆಗೆ ನಮೂದಾಗಿದ್ದು ಅವರು ನಮ್ಮ ಕುಟುಂಬದ ಸದಸ್ಯರಲ್ಲ ಎಂದರೆ ಸರಿ . ಸದರಿ ಜಮೀನು ಖರೀದಿ ಪತ್ರದ ಮೂಲಕ ಅವರಿಗೆ ಹೋಗಿದ್ದು ಸದರಿ ಕ್ರಯ ಪತ್ರ ನನ್ನ ಹಿಸ್ಸೆಯ ಮೇಲೆ ಬಂಧನಕಾರಿ ಇರುವುದಿಲ್ಲ ಎಂದು ಪ್ರಾರ್ಥನೆ ಕೋರಿಲ್ಲ ಎಂದರೆ ಸರಿ .

ಅವಿಭಕ್ತ ಕುಟುಂಬ ಎಂದು ತೋರಿಸಲು ಮೂರು ಮಂದಿ ಹೆಸರುಗಳು ಇರುವ ಜಮೀನು ಉತಾರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ದಾವಾ ಆಸ್ತಿಗಳ ಖಾತಾ ಬದಲಾವಣೆ ಉತಾರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ . ಸದರಿ ಹಳೆಯ ಉತಾರಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ. ಹಳೆಯ ಉತಾರಗಳನ್ನು ಹಾಜರುಪಡಿಸಿದರೆ ದಾವೆಗೆ ತೊಂದರೆಯಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನನ್ನ ತಮ್ಮ ಗೋಪಾಲಕೃಷ್ಣ ತನ್ನ 1/3 ಹಿಸ್ಸೆಯನ್ನು ಮಹಬೂಬ ಅಲ್ಲಾಸಾಹೇಬ ಮುಲ್ತಾನಿ 1999 ರಲ್ಲಿ ರೂ.30,000/-ಕ್ಕೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ . ಆ ಸಮಯದಲ್ಲಿ 7 ನೇ ಪ್ರತಿವಾದಿ ಹಾಗೂ ಉಳಿದ ಹಿರಿಯರು ಪಂಚಿಕೆ ಮಾಡಿ ಮರಳಿ 1/3 ಹಿಸ್ಸೆಯನ್ನು ನನ್ನ ಮಗ ಮಲ್ಲಪ್ಪನ ಹೆಸರಿನಲ್ಲಿ ಖರೀದಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿ. ನನ್ನ ತಮ್ಮ ಗೋಪಾಲಕೃಷ್ಣ ತನ್ನ ಹಿಸ್ಸೆಯಲ್ಲಿನ ಅರ್ಧಭಾಗವನ್ನು ನನಗೆ ರೂ.30,000/- ಗಳಿಗೆ ಮಾರಾಟ ಮಾಡಿದ್ದ ಎಂದರೆ ಸರಿ . ಇವೆಲ್ಲ ವ್ಯವಹಾರಗಳು ರುಣಭಾರ ಪತ್ರದಲ್ಲಿ ನಮೂದಾಗಿವೆ ಎಂದರೆ ಸರಿ . 2 ರುಣಭಾರ ಪತ್ರಗಳನ್ನು ಸಾಕ್ಷಿಗೆ ತೋರಿಸಾಗಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿಡಿ.1 ಮತ್ತು ನಿಡಿ.2 ಎಂದು ಗುರುತಿಸಲಾಯಿತು. ಗೋಪಾಲಕೃಷ್ಣ ಕೆಟ್ಟ ಹವ್ಯಾಸಕ್ಕೆ ಬಿದ್ದಿದ್ದರಿಂದ ನಮ್ಮ ಮನೆತನದಲ್ಲಿ ಆವಾಗಲೇ ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಎಮ್ ಇ ಸಂಖ್ಯೆ 1445 ದಿಃ04-07-

1998 ರ ಪ್ರಕಾರ 6 ಸರ್ವೆ ಸಂಖ್ಯೆಗಳಲ್ಲಿ 6 1/2 ಎಕರೆ ಜಮೀನು ನನ್ನ ಮತ್ತು ನನ್ನ ಮಗನ ಹೆಸರಿಗೆ ಹಾಗೂ 3 ಸರ್ವೆ ಸಂಖ್ಯೆಗಳಲ್ಲಿ 3 ಎಕರೆ ಜಮೀನು ಗಿರಿಯಪ್ಪಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1998 ರಲ್ಲೇ ನಮ್ಮ ಕುಟುಂಬದಲ್ಲಿ ವಾಟನಿ ಆಗಿದ್ದು ಆ ಪ್ರಕಾರ ನಾವು ಬೇರೆ ಬೇರೆ ಕಬ್ಜ ವಹಿವಾಟು ಮಾಡಿಕೊಂಡು ಬಂದಿರುತ್ತೇವೆ ಎಂದರೆ ಸರಿಯಲ್ಲ.

1998 ರಲ್ಲಿ ವಾಟನಿ ಆದ ನಂತರ ಸರ್ವೆ ಸಂಖ್ಯೆ 111 ನ್ನು ನಾನೇ ಖುದ್ದಾಗಿ ಬಸವಣ್ಣಿ ರಾಮಪ್ಪ ಮಗದುಮರವರಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸರ್ವೆ ಸಂಖ್ಯೆ 107 ರಲ್ಲಿ 1 ಎಕರೆ ಜಮೀನನ್ನೂ ಸಹ ಬೇರೆಯವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ವ್ಯವಹಾರದ ಬಗ್ಗೆ ನಿಡಿ.2 ರಲ್ಲಿ ನಮೂದಾಗಿದೆ ಎಂದರೆ ಸರಿ . 1999 ರಲ್ಲಿ ಸದರಿ ಮಾರಾಟ ಪ್ರಕ್ರಿಯೆ ಆಗಿರುತ್ತದೆ ಎಂದರೆ ಸರಿ . ಸರ್ವೆ ಸಂಖ್ಯೆ 111 ಮತ್ತು 107 ಗಳನ್ನು ನಾನೇ ಮಾರಿದ್ದು ಗೊತ್ತಿದ್ದರೂ ಸಹ ಗೋಪಾಲಕೃಷ್ಣ ಮಾರಿರುತ್ತಾನೆ ಎಂದು ವಾದ ಪತ್ರದಲ್ಲಿ ಸುಳ್ಳಾಗಿ ಬರೆಯಿಸಿರುತ್ತೇನೆ ಎಂದರೆ ಸರಿಯಲ್ಲ. 1999 ರಲ್ಲೇ ಆಸ್ತಿಗಳನ್ನು ಮಾರಾಟ ಮಾಡಿದ್ದರಿಂದ ದಾವೆ ಕಾಲಪರಿಮಿತಿಯಲ್ಲಿ ಬರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಪಾಟಿಸವಾಲು ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ ಹೆ ಕೇ ಸರಿ ಅದೇ**

**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**